ದಿನದಿನವು ಕುಸಿದು ಕಟ್ಟಿಸಿಕೊಳುವ ಗುಡಿ ವಿಶ್ವ
ಜನರೆಲ್ಲರಾಗುಡಿಯ ಕೆಲಸದಾಳುಗಳು
ಮನೆಯೇನು? ನಾಡೇನು? ಕುಲವೇನು? ಮತವೇನು?
ಎಣಿಸೆಲ್ಲವದೆಯೆಂದು – ಮಂಕುತಿಮ್ಮ

ಕರ್ಮಯೋಗವನ್ನು ಕುರಿತ ಪ್ರವಚನವೊಂದರಲ್ಲಿ ಸ್ವಾಮಿ ವಿವೇಕಾನಂದರು 'ನಿಃಸ್ವಾರ್ಥತೆಯೇ ದೇವರು' ಎಂಬ ಮಾತನ್ನು ಹೇಳುತ್ತಾರೆ. 'ತಾಯಿ ನಿನ್ನ ದೇವರಾಗಲಿ' ಎಂಬ ವೈದಿಕ ಅನುಶಾಸನದ ಅರ್ಥವೂ ಇದೇ. ಕಾರಣ ಹಿಂದೆಯೇ ನೋಡಿದ ಹಾಗೆಯೇ ತಾಯಿಯಾದವಳು 'ನಿಃಸ್ವಾರ್ಥಸೇವೆ'ಯ ಸಾಕಾರಮೂರ್ತಿ. ಈ ನಿಃಸ್ವಾರ್ಥತೆ ಇದ್ದಾಗ ಮಾತ್ರ ಸೇವೆ ಎನ್ನುವುದು ಸಾಮಾಜಿಕ ಜೀವನವನ್ನು ನೋಡುವ ಒಂದು ಮೂಲಭೂತ ದೃಷ್ಟಿಕೋನವಾಗಲು ಸಾಧ್ಯ.

## ಶೀಲಹೀನ ವ್ಯಕ್ತಿಯ ಅವಗುಣಗಳು

ವಿದ್ಯಾಭ್ಯಾಸದ ಈ ಪಂಚಶೀಲಗಳ ಬಗ್ಗೆ ಗಮನ ಕೊಡದ ಶಿಕ್ಷಣ ವ್ಯವಸ್ಥೆಯಿಂದ ಎಂಥ ವ್ಯಕ್ತಿ ತಯಾರಾಗುತ್ತಾನೆ? ಅಂಥವನು ಜನ ಮೆಚ್ಚದ ವ್ಯಕ್ತಿಯಾಗುತ್ತಾನೆ. ಜನ ಅವನನ್ನು ಏಕೆ ಮೆಚ್ಚುವುದಿಲ್ಲ? ಏಕೆ ಅವನಿಂದ ದೂರ ಸರಿಯುತ್ತಾರೆ? ಇದಕ್ಕೆ ಕೆಲವು ನಿದರ್ಶನಗಳನ್ನು ಹೀಗೆ ನೀಡಬಹುದು:

(೧) **ಅವನು ನಂಬಿಕೆಗೆ ಅರ್ಹನಾದ ವ್ಯಕ್ತಿಯಲ್ಲ.** ಕಾಗದ ಬರೆದರೆ ಸರಿಯಾಗಿ ಉತ್ತರಿಸುವ ಅಭ್ಯಾಸ ಅವನಿಗಿಲ್ಲ. ಓದಲು ತೆಗೆದುಕೊಂಡುಹೋದ ಪುಸ್ತಕವನ್ನು ಸಮಯಕ್ಕೆ ಸರಿಯಾಗಿ ಹಿಂದಿರುಗಿಸುವುದಿಲ್ಲ. ಬಸ್‌ನಿಲ್ದಾಣದಲ್ಲಿ ಆರು ಗಂಟೆಗೆ ಸಿಗುತ್ತೇನೆಂದು ಮಾತುಕೊಟ್ಟರೂ, ಎಂಟು ಗಂಟೆಯಾದರೂ ಅಲ್ಲಿಗೆ ಬರುವುದಿಲ್ಲ. ಸಣ್ಣಪುಟ್ಟ ಕೆಲಸಗಳಲ್ಲಿ ಸ್ವಲ್ಪ ಸಹಾಯ ಮಾಡುತ್ತೀಯಾ ಎಂದರೆ 'ಸಮಯವಿಲ್ಲ' ಎನ್ನುತ್ತಾನೆ. ಕೆಲಸ ಮಾಡಲು ಬಂದರೂ ಮುಖ ಗಂಟುಹಾಕಿಕೊಂಡಿರುತ್ತಾನೆ.

(೨) **ಅವನು ವಾದಪ್ರಿಯ.** ಅವನು ಇತರರ ಪ್ರತಿಯೊಂದು ಮಾತಿಗೂ ವಿರೋಧ ಹೇಳುತ್ತಾನೆ. ಮುಖಕ್ಕೆ ಹೊಡೆದಂತೆ ಬಿರುಸಾಗಿ ಮಾತನಾಡುತ್ತಾನೆ. ಇತರರ ಮಾತಿನ ಅಭಿಪ್ರಾಯದ ಕಡೆಗೆ ಗಮನವೀಯದೆ ಸಣ್ಣಪುಟ್ಟ ದೋಷಗಳನ್ನೂ ಎತ್ತಿ ಹೇಳುತ್ತಾನೆ. ಅವನಿಗೆ ಸತ್ಯಸ್ಥಿತಿಯನ್ನು ತಿಳಿಯುವ ಕುತೂಹಲವಿಲ್ಲ. ಅವನಿಗೆ ಕೇವಲ ಬುದ್ಧಿವಂತಿಕೆ ಪ್ರದರ್ಶನ ಮಾಡುವ ಹವ್ಯಾಸ ಮಾತ್ರ.

(೩) **ಅವನು ಯಾವಾಗಲೂ ತನ್ನ ವಿಚಾರ ಮಾತ್ರ ಮಾತನಾಡುತ್ತಿರುತ್ತಾನೆ, ತನ್ನ ಸುಖದುಃಖಗಳನ್ನೇ ಹೇಳುತ್ತಿರುತ್ತಾನೆ.** 'ಆಫೀಸಿಗೆ ಹೊತ್ತಾಗಿದೆ, ಹೋಗುತ್ತೇನೆ' ಎಂದು ಹೇಳಿದರೂ, ಇತರರನ್ನು ನಿಲ್ಲಿಸಿಕೊಂಡು ಮಾತನಾಡುತ್ತಾನೆ. 'ನಮ್ಮನ್ನು ಕುರಿತು ನಮಗೆ ಅತ್ಯಂತ ಹೆಚ್ಚಿನ ಅಭಿರುಚಿ ಇರುವುದಾದರೂ, ಇತರರಿಗೆ ನಾವು ಅಭಿರುಚಿಯ ವಿಷಯವಾಗಿರುವುದಿಲ್ಲ' ಎಂಬುದನ್ನು ಆತ ಮರೆತಿದ್ದಾನೆ. ಇತರರ ಸುಖದುಃಖಗಳಲ್ಲಿ ಸಹಾನುಭೂತಿ ತೋರಿಸುವುದಿರಲಿ, ಅದನ್ನು ಆಲಿಸುವ ತಾಳ್ಮೆಯೂ ಅವನಿಗಿಲ್ಲ. ಪಕ್ಕದ ಕೋಣೆಯಲ್ಲಿರುವರು ಜ್ವರದಿಂದ ಮಲಗಿದ್ದರೂ ಅವನು ವಿಚಾರಿಸುವುದಿಲ್ಲ, 'ದಢಾರ್' ಎಂದು ಬಾಗಿಲು ಎಳೆದುಕೊಳ್ಳುತ್ತಾನೆ. ಸಮೀಪದಲ್ಲಿರುವ ವಿದ್ಯಾರ್ಥಿಯು ಪರೀಕ್ಷೆಗಾಗಿ ಓದುತ್ತಿದ್ದರೆ ಅವನು ಅಪಸ್ವರದಲ್ಲಿ ಕೆಟ್ಟ ಹಾಡುಗಳನ್ನು ಕಿರುಚುತ್ತಿರುತ್ತಾನೆ.

(೪) **ಇತರರ ದೋಷಗಳನ್ನು ವರ್ಣನೆ ಮಾಡುವಾಗ ಅವನು ದಶಮುಖನಾಗುತ್ತಾನೆ.** ಇತರರನ್ನು ಬೆನ್ನಹಿಂದೆ ಹೀನಾಯವಾಗಿ ಟೀಕಿಸುವುದೆಂದರೆ ಆತನಿಗೆ ಜೇನು ಸವಿದಂತೆ. ಆತ, ಕೊಂಕುನುಡಿ, ವ್ಯಂಗ್ಯೋಕ್ತಿಗಳ ಸಂಗ್ರಹವೇ ಆಗಿರುತ್ತಾನೆ, ನಾಲ್ಕು ಜನರ ಮಧ್ಯದಲ್ಲೇ, ಒಬ್ಬ ವ್ಯಕ್ತಿಯ ಎದುರಿಗೇ, ಅವನ ದೌರ್ಬಲ್ಯಗಳನ್ನು ಹಾಸ್ಯದ ನೆವದಲ್ಲಿ ಬಯಲಿಗೆಳೆಯುವುದೆಂದರೆ ಅವನಿಗೆ ಮೋಜೆನಿಸುತ್ತದೆ.

(೫) **ನಾಲ್ಕು ಮಂದಿಯೊಡನೆ ಬೆರೆಯುವಾಗ ಆತ ಇತರರ ಅಸ್ತಿತ್ವಕ್ಕೆ ಬೆಲೆ ಕೊಡುವುದಿಲ್ಲ.** ತಾನೊಬ್ಬನೇ ಕೆಲಸಗಾರ, ಇತರರೆಲ್ಲ ನಿದ್ದೆ ಹೊಡೆಯುವ ಸೋಮಾರಿಗಳು ಎಂದು ತೋರಿಸಿಕೊಳ್ಳುತ್ತಾನೆ. ಗಟ್ಟಿಯಾಗಿ ಕೂಗಾಡುತ್ತಾ, ಗೊಂದಲವೆಬ್ಬಿಸಿ ಸಣ್ಣ ಕೆಲಸವೊಂದನ್ನು ಮಾಡುತ್ತಿದ್ದರೂ ಪರ್ವತ ಉರುಳಿಸುವಂತೆ ನಟಿಸುತ್ತಾನೆ.


(೬) **ಇತರರ ಎಲ್ಲಾ ವಿಚಾರಗಳೂ ಅವನಿಗೆ ಬೇಕು.** ಅವರು ಏನು ಮಾಡುತ್ತಾರೆ? ಎಲ್ಲಿಗೆ ಹೋಗುತ್ತಾರೆ? ಅವರ ದುರಭ್ಯಾಸಗಳೇನು? ಇತ್ಯಾದಿ.

(೭) **ತನಗೆ ಗೊತ್ತಿಲ್ಲದ ವಿಚಾರದಲ್ಲಿ ಬಾಯಿ ಹಾಕುವ ಅಭ್ಯಾಸ ಅವನಿಗಿದೆ.** 'ನನಗೆ ಆ ವಿಚಾರ ತಿಳಿಯದು' ಎಂದು ಅವನು ಎಂದಿಗೂ ಹೇಳಲಾರ.


(೮) **ಹತ್ತು ಜನರ ಹಕ್ಕುಬಾಧ್ಯತೆಗಳನ್ನೂ ಗಮನಿಸದೆ 'ಎಲ್ಲದರಲ್ಲೂ ನಾನು ಮುಂದೆ' ಎನ್ನುವ ಪ್ರವೃತ್ತಿ ಅವನಿಗಿದೆ.**

(೯) **ಅವನಿಗೆ ಯಾವ ಆದರ್ಶವೂ ಇಲ್ಲ, ವೈಶಿಷ್ಟ್ಯವೂ ಇಲ್ಲ. ಅವನು ಪ್ರಾಮಾಣಿಕನಲ್ಲ.**

ಇಂಥ ಮನುಷ್ಯ ಎಲ್ಲೆಲ್ಲೂ, ಎಲ್ಲರಲ್ಲೂ, ಅಲ್ಪ ಪ್ರಮಾಣದಲ್ಲಿಯಾದರೂ ಇದ್ದಾನೆ. ಇಂಥವನಿಗಾಗಿ ನಮ್ಮ ಅಂತರಂಗದಲ್ಲಿಯೇ ಸ್ವಲ್ಪ ಹುಡುಕಾಟ ನಡೆಸಿ, ಇವನ ಪ್ರಭಾವವನ್ನು ಕಡಿಮೆ ಮಾಡಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಇಂಥ ಅಭ್ಯಾಸವು ನಮ್ಮ ದುರ್ಲಭವಾದ ಬದುಕಿಗೆ ಸ್ವಲ್ಪವಾದರೂ ಸುಖ–ಶಾಂತಿಯ ಸೌಖ್ಯವನ್ನು ತಂದುಕೊಡಬಲ್ಲದು, ಬದುಕಿಗೆ ಸಾರ್ಥಕತೆಯನ್ನೀಯಬಲ್ಲದು ಹಾಗೂ ರಾಷ್ಟ್ರಕ್ಕೆ ಶ್ರೇಯಸ್ಸನ್ನು ಉಂಟುಮಾಡಬಲ್ಲದು. ಅಂತಹ ದೇಶ ಅಥವಾ ಸಮಾಜ ಮಾತ್ರವೇ ಶ್ರೇಷ್ಠವಾದುದು ಎನಿಸಿಕೊಳ್ಳುತ್ತದೆ. ಇದು ಸಾಧ್ಯವಾಗುವುದು ವ್ಯಕ್ತಿಗತ ಪರಿವರ್ತನೆಯಿಂದ ಮಾತ್ರ. ✪


ನರೇಂದ್ರ ಬೆಳೆಯುತ್ತ ಬೆಳೆಯುತ್ತ ವ್ಯಾಯಾಮ, ಕುಸ್ತಿ, ಕತ್ತಿವರಸೆ, ದೋಣಿ ನಡೆಸುವುದರ ಜೊತೆಗೆ ಇನ್ನೂ ಅನೇಕ ಆಟಗಳನ್ನು ಕಲಿತನು.
ಅವನ ಕಂಠಧ್ವನಿ ಬಲುಮಧುರವಾಗಿತ್ತು. ಹಾಗೆಯೇ ಅವನು ಭಾವ ತುಂಬಿ ಹಾಡುತ್ತಿದ್ದನು.
ಕೃಪೆಯ ದಿನವೆಂದು ಮೂಡುವುದೋ, ಪ್ರೇಮವೆನ್ನ ಹೃದಯವನ್ನು ಎಂದು ಎಚ್ಚರಿಸುವುದೋ
ಅವನ ಮನೆಯ ಬೀದಿಯಲ್ಲಿ ಭಿಕ್ಷುಕರು, ಸಾಧುಗಳು ಹಾದುಹೋಗುತ್ತಿದ್ದರು. ನರೇಂದ್ರ ತನ್ನ ಕೈಗೆ ಸಿಕ್ಕಿದ ಪದಾರ್ಥಗಳನ್ನು ಅವರಿಗೆ ಕೊಟ್ಟುಬಿಡುತ್ತಿದ್ದನು. ಅವುಗಳ ಬೆಲೆಯ ಕಡೆ ಎಳ್ಳಷ್ಟೂ ಅವನಿಗೆ ಗಮನವಿಲ್ಲ.
ದಯಮಾಡಿ ಸ್ವೀಕರಿಸಿ, ಆನಂದದಿಂದಿರಿ.
ನರೇಂದ್ರನ ತಾಯಿಗೆ ಅವನ ಧಾರಾಳತನವನ್ನು ಅರಿಯಲಾಗಲಿಲ್ಲ.
ನರೇಂದ್ರ ! ಬೀದಿಯಲ್ಲಿ ಹೋಗಿಬರುವವರಿಗೆಲ್ಲ, ಕೈಗೆ ಸಿಕ್ಕಿದ್ದನ್ನೆಲ್ಲ ಏಕಪ್ಪ ಕೊಟ್ಟುಬಿಡುತ್ತೀಯೆ?

ಮಗನ ಈ ಬಗೆಯ ಉದಾರತೆ ತಾಯಿಗೆ ಸಹಿಸಲಾರದ ಸಮಸ್ಯೆಯಾಯಿತು. ಭಿಕ್ಷುಕರು ಬರುವ ವೇಳೆಯಲ್ಲಿ, ಮಹಡಿಯ ಮೇಲಿನ ಕೋಣೆಯೊಂದರಲ್ಲಿ ನರೇಂದ್ರನನ್ನು ಕೂಡಿಹಾಕಿ ಬೀಗ ಹಾಕುತ್ತಿದ್ದಳು.



ನರೇಂದ್ರ ಮತ್ತು ಗೆಳೆಯರು ಒಂದು ತೋಟದಲ್ಲಿ ಮರಕೋತಿ ಆಟ ಆಡುತ್ತಿದ್ದರು. ತಲೆಕೆಳಕಾಗಿ ಕೊಂಬೆಯನ್ನು ಕೈಯಲ್ಲಿ ಹಿಡಿದು ನೇತಾಡುತ್ತಿದ್ದರು. ಆ ತೋಟದ ಪಕ್ಕದಲ್ಲಿಯೇ ಮನೆಯಿದ್ದ ಒಬ್ಬ ಮುದುಕರಿಗೆ ಇದು ಕಿರುಕುಳವನ್ನು ಉಂಟುಮಾಡಿತು. ಅವರು ಇದನ್ನು ತಪ್ಪಿಸಬೇಕೆಂದು ಒಂದು ಉಪಾಯ ಮಾಡಿದರು.

